ಅ) ನಿವೇಶನ ಜಾಗವನ್ನು ಸ್ವಾಧೀನಪಡಿಸಿಕೊಂಡಿರುವುದು ನಿಜವೇ, ಹಾಗಿದಲ್ಲಿ ಕಟ್ಟಡದ ಕೆಲಸವನ್ನು ಪ್ರಾರಂಭಮಾಡುವುದು ಯಾವಾಗ ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಹೌದು. ಅಂದಾಜು ವೆಚ್ಚದ ಪಟ್ಟಿಯನ್ನು ಇದುವರೆವಿಗೂ ತಯಾರಿಸಿಲ್ಲ.

ಆ) ಇಲ್ಲ. ನಿವೇಶನವನ್ನು ಸ್ವಾಧೀನ ಪಡೆದುಕೊಂಡ ಕೂಡಲೇ ಮುಂದಿನ ಕ್ರಮ ತೆಗೆದು ಕೊಳ್ಳಲಾಗುವುದು.

ಚಿಕ್ಕಕಲ್ಲೂರು ಮತ್ತು ಕಲ್ಲೂರು ಗ್ರಾಮಗಳ ಮಧ್ಯೆ ಸೇತುವೆ ನಿರ್ಮಾಣ ಮಾಡುವುದ

೧೪೧೨ (೧೭೦೦) ಶ್ರೀ ಬಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗುಬ್ಬಿ ತಾಲ್ಲೂಕು ಚಿಕ್ಕಕಲ್ಲೂರು ಮತ್ತು ಕಲ್ಲೂರು ಗ್ರಾಮಗಳ ಮಧ್ಯೆ ಶಂಶಾ ನದಿ ಹರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದಲ್ಲಿ ಚಿಕ್ಕಕಲ್ಲೂರಿನಿಂದ ಕಲ್ಲೂರಿಗೆ ಬರಲು ಜನ, ಜಾನುವಾರುಗಳು, ಗಾಡಿ ವಾಹನಗಳ ಸಂಚಾರಕ್ಕೆ ಸೇತುವೆ ನಿರ್ಮಾಣ ಮಾಡಬೆ ಕೆಂದು ಸಾರ್ವಜನಿಕರು ಈ ಬಗ್ಗೆ ೨೦ ವರ್ಷಗಳಿಂದ ಸರ್ಕಾರವನ್ನು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸದರಿ ತಾಲ್ಲೂಕಿನ ಜನರ ತೊಂದರೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಹಾಗಿಲ್ಲದಿದ್ದಲ್ಲಿ ಕ್ರಮಗಳನ್ನು ಕೈಗೊಳ್ಳುವುದು ಯಾವಾಗ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ಮತ್ತು ಈ) ಈ ಸೇತುವೆಯನಿರ್ಮಾಣದ ಅಂದಾಜು ಸುಮಾರು ೮ ಲಕ್ಷ ರೂ.ಗಳಾಗುತ್ತದೆ. ಈ ಸೇತುವೆಯನ್ನು ಕಟ್ಟಬೇಕಾದರ್ಸ್ತೆಯು. ಈಗ ತುಮಕೂರು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬರುವುದರಿಂದ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಜಿಲ್ಲಾಪರಿಷತ್ತಿನವರಿಗೆ ತಿಳಿಸಲಾಗುವುದು.

ಡಿಪ್ಲೊಮೋ ಕಾಲೇಜುಗಳ ಬಗ್ಗೆ

೧೪೧೩(೧೯೯೯) ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಸರ್ಕಾರದ ಸ್ವಾಮ್ಯದಲ್ಲಿ ಮತ್ತು ಖಾಸಗಿ ಸ್ವಾಮ್ಯದಲ್ಲಿರುವ ಡಿಪ್ಲೊಮೊ ಕಾಲೇಜುಗಳೆಷ್ಟು ?

ಆ) ಆ ಪೈಕಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಖಾಸಗಿ ಕಾಲೇಜುಗಳೆಷ್ಟು ? ಶಾಲೆ ನಡೆಸಲು (ಪ್ರಯೋಗಾಲಯ) ಉಪಕರಣಗಳಿವೆಯೆ ?

ಇ) ಸದರಿ ಕಾಲೇಜುಗಳಿಗೆ ಆಟವ ಮೈದಾನಗಳಿವೆಯೆ ? ಹಾಗಿಲ್ಲದಿದ್ದಲ್ಲಿ ಇಂತಹ ಕಾಲೇಜು ಗಳಿಗೆ ಆಟದ ಮೈದಾನವನ್ನು ಒದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ರಾಜ್ಯದಲ್ಲಿ ಸರ್ಕಾರ. ಅನುದಾನಿತ ಮತ್ತು ಖಾಸಗಿ ವಲಯದಲ್ಲಿರುವ ಪಾಲಿಟೆಕ್ನಿಕ್‌ಗಳ ಸಂಖ್ಯೆ ಕೆಳಕಂಡಂತಿವೆ: —